ಓ.ಎಸ್‌ಃ 187/2018

ಪಿ.ಡಬ್ಲ್ಯೂಃ 01

**ದಿನಾಂಕಃ 06-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು**

**ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಎಂ.ಹೆಚ್.ಕೆ ವಕೀಲರಿಂದಃ**

1. ಮೃತ್ಯು ಪತ್ರವನ್ನು ಲಕ್ಕವ್ವ ಪಾಂಡಪ್ಪ ಲಮಾಣಿ ರವರು ತಂದುಕೊಟ್ಟಿರುತ್ತಾರೆ . ಸದರಿ ಮೃತ್ಯು ಪತ್ರವನ್ನು ತಹಶೀಲ್ದಾರ ಕಛೇರಿಗೆ ನೀಡಿರುತ್ತೇನೆ. ತಹಶೀಲ್ದಾರ ಕಛೇರಿಗೆ ನೀಡಿದರೆ ಹಿಂಬರಹ ನೀಡುತ್ತಾರೆ ಎಂದರೆ ಸರಿ. ತಹಶೀಲ್ದಾರ ಕಛೇರಿಗೆ ಮೂಲ ದಾಖಲಾತಿ ನೀಡಿರುತ್ತೇವೆ ಎಂದು ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ಲಕ್ಕವ್ವ ಪಾಂಡಪ್ಪ ಲಮಾಣಿ ರವರು ವೀಲ್ ಮಾಡಿರುವುದಿಲ್ಲ, ವೀಲ ಮಾಡಿಲ್ಲದ ಕಾರಣ ತಹಶೀಲ್ದಾರ ಕಛೇರಿಗೆ ಮೂಲ ವೀಲನ್ನು ಹಾಜರುಪಡಿಸುವ ಪ್ರಸಂಗವೆ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ವೀಲನ್ನು ತಹಶೀಲ್ದಾರ ಕಛೇರಿಗೆ ನೀಡಿರುತ್ತೇನೆ ಎಂದು ದಾವೆಯಲ್ಲಿ ಬರೆಸಿಲ್ಲ ಎಂದರೆ ಸರಿ. ನಿಪಿ-15 ರಲ್ಲಿ ಇರುವ ಸಹಿ ಲಕ್ಕವ್ವನ ಸಹಿ ಎಂದು ಗುರುತಿಸಲು ಆಗುವುದಿಲ್ಲ ಎಂದರೆ ಸರಿ. ಲಕ್ಕವ್ವನ ಸಹಿಯನ್ನು ಯಾರು ಗುರುತಿಸಿರುತ್ತಾರೆ ಎಂದು ನಿಪಿ-15 ರ ಆಧಾರದ ಮೇರೆಗೆ ಗೊತ್ತಾಗುವುದಿಲ್ಲ ಎಂದರೆ ಸರಿ. ಲಕ್ಕವ್ವ ವೀಲ್ ಮಾಡದೇ ಇದ್ದರು ಸಹ ಮೂಲ ವೀಲನ್ನು ಹಾಜರಪಡಿಸಿದರೆ ಸತ್ಯಾಂಶ ಗೊತ್ತಾಗುತ್ತದೆ ಎಂದು ಮೂಲ ವೀಲನ್ನು ಹಾಜರುಪಡಿಸದೆ ನಿಪಿ-15 ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಮೂಲ ವೀಲನ್ನು ತಹಶೀಲ್ದಾರ ಕಛೇರಿಗೆ ನೀಡಿದ್ದು, ಸಂಪೂರ್ಣ ಕಡತವನ್ನು ತಹಶೀಲ್ದಾರ ಕಛೇರಿಯವರು ಕಳೆದುಹಾಕಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ ಅಮಿತ್ ಘಟ್ಟಿ)**

**ದಿವಾಣಿ ನ್ಯಾಯಾಧೀಶರು ಮತ್ತು**

**ನ್ಯಾಯಿಕ ದಂಡಾಧಿಕಾರಿಗಳು**

**ಬಸವನ ಬಾಗೇವಾಡಿ.**